# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 102/2024 |
| ಸಿ.ಡಬ್ಲೂ | : 04 |
| ಪಿ.ಡಬ್ಲೂ | : 02 |
| ಸಾಕ್ಷಿಯ ಹೆಸರು | : ಗಿರೀಶ ಹನಮರಡ್ಡಿ ನೀಲಗುಂದ |
| ವಯಸ್ಸು | : 40 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಕರ್ಲವಾಡ. |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 09.01.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿರು ನನ್ನ ಸಂಬಂಧಿಕರು. ಚಾಸಾ-1 ರವರು ನನ್ನ ತಾಯಿ. ಚಾಸಾ-5 ನನ್ನ ಚಿಕ್ಕಮ್ಮ. ಚಾಸಾ-6 ರಿಂದ 8 ರವರ ಪರಿಚಯ ಇದೆ.

ಈಗ ಅಂದಾಜು 04 ವರ್ಷಗಳ ಹಿಂದೆ ಬೆ.09.00 ಗಂಟೆಗೆ ಕರ್ಲವಾಡ ಗ್ರಾಮದ ನಮ್ಮ ಮನೆಯ ಮುಂದೆ ಆಸ್ತಿ ವಿಷಯಕ್ಕೆ ಹಾಗೂ ಮುಸರಿ ಚೆಲ್ಲುವ ವಿಷಯ ಸಂಬಂಧಿಸಿ ನಮಗೂ ಮತ್ತು ಆರೋಪಿತರಿಗೂ ಬಾಯಿಮಾತಿನ ಜಗಳವಾಗಿರುತ್ತದೆ. ಆದರೆ ಆರೋಪಿ ನನಗೆ ಹೊಡೆ ಬಡೆ ಮಾಡಿಲ್ಲ. ಅವಾಚ್ಯವಾಗಿ ಬೈದಿಲ್ಲ ಹಾಗೂ ಜೀವಬೆದರಿಕೆ ಹಾಕಿರುವುದಿಲ್ಲ. ಪ್ರಕರಣಕ್ಕೆ ಸಂಬಂದಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 10.07.2021 ರಂದು ಬೆ.09.00 ಗಂಟೆಗೆ ಚಾಸಾ-1 ರವರು ನಮ್ಮ ಮನೆಯ ಹಿತ್ತಲಲ್ಲಿ ಮುಸುರಿ ಚೆಲ್ಲಿದ್ದರ ಸಿಟ್ಟಿನಿಂದ ಆರೋಪಿತರು ಅಕ್ರಮಕೂಟವನ್ನು

ರಚಿಸಿಕೊಂಡು ಬಂದು 1 ನೇ ಆರೋಪಿ ಚಾಸಾ-1 ರವರಿಗೆ ಭೋಸಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿದ ನನಗೆ 2 ಮತ್ತು 3 ನೇ ಆರೋಪಿತರು ಹೊಡೆಬಡೆ ಮಾಡಿದ್ದು, 3 ನೇ ಆರೋಪಿ ಬಡಿಗೆಯಿಂದ ನನ್ನ ದುಬ್ಬಕ್ಕೆ ಹೊಡೆದಿದ್ದು, 2 ನೇ ಆರೋಪಿ ಕೈಯಿಂದ ನನ್ನ ಕಪಾಳಕ್ಕೆ ಹಾಗೂ ತಲೆಗೆ ಹೊಡೆದು ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ ಕೈಹಿಡಿದು ಎಳೆದಾಡಿದ್ದು, 4 ನೇ ಆರೋಪಿ ಕೈಯಿಂದ ಹೊಡೆಬಡೆ ಮಾಡಿ ಕಾಲಿನಿಂದ ಒದ್ದು, ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 4 ನೇ ಆರೋಪಿ ನೆಲಕ್ಕೆ ಕೆಡವಿ ಗಾಯ ಪಡಿಸಿ ಜೀವ ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಭಾಗವನ್ನು **ನಿಪಿ-3** ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜಿ ಆದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಎನ್ ವಾಯ್ ಎಚ್ ವಕೀಲರಿಂದಃ**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**